ದಿಃ 09-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು ಃ** ಪ್ರತಿವಾದಿ ಪರವಾಗಿ ಶ್ರೀ ಎ ಎಫ್ ಕೆ ವಕೀಲರಿಂದ.

ನಾನು ಶಾಲೆ ಓದಿಲ್ಲ. ನಾನು ಧಾರವಾಡ ತಾಲೂಕಿನ ಮಣಕಾಪುರ ಗ್ರಾಮದಲ್ಲಿ ವಾಸವಿರುತ್ತೇನೆ ಎಂದರೆ ಸರಿ. ಮಣಕಾಪುರ ಗ್ರಾಮದಲ್ಲಿ 20 ವರ್ಷಗಳಿಂದ ವಾಸವಿರುತ್ತೇನೆ. ಪ್ರತಿವಾದಿ 3 ರವರು ತೇರಗಾಂವದಲ್ಲಿ ವಾಸವಿರುತ್ತಾರೆ ಎಂದರೆ ಸರಿ. ಈ ದಾವೆಯನ್ನು ಪ್ರತಿವಾದಿ 3 ರವರ ವಿರುದ್ಧ ನನ್ನ ತಂದೆ ಆಸ್ತಿ ಬೇಕು ಎಂದು ಹೂಡಿದ್ದೇನೆ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನೀವು ಹೇಳಿ ಬರೆಸಿಲ್ಲ ಎಂದರೆ ಸಾಕ್ಷಿ ಅದರ ಮಾಹಿತಿಯನ್ನು ನನ್ನ ಚಿಕ್ಕಪ್ಪನವರಾದ ವಾದಿ 2 ರವರು ನೀಡಿದ್ದಾರೆ ಎನ್ನುತ್ತಾರೆ. ನನ್ನ ತಂದೆ ಹೆಸರು ಇಬ್ರಾಹಿಂ ಸಾಬ ಅಬ್ದುಲ್ ರೆಹಮಾನ್ ತಿಗಡೊಳ್ಳಿ.ನನ್ನ ತಂದೆ ಇಬ್ರಾಹಿಂ ಸಾಬ ಅಬ್ದುಲ್ ರೆಹಮಾನ್ ತಿಗಡೊಳ್ಳಿ ರವರು ಅಲ್ಲಾವರದಲ್ಲಿ ತೀರಿಕೊಂಡಿದ್ದಾರೆ, ದಿನಾಂಕ ನೆನಪಿಲ್ಲ ಎನ್ನುತ್ತಾರೆ. ನನ್ನ ತಂದೆಗೆ ನಾವು 4 ಜನ ಗಂಡು ಮಕ್ಕಳು. ನಾವು ನಾಲ್ಕು ಜನ ಗಂಡು ಮಕ್ಕಳು ದಾವೆಯಲ್ಲಿ ಪಕ್ಷಗಾರರಾಗಿದ್ದೇವೆ. ಅಬ್ದುಲ್ ರೆಹಮಾನ್ ತಿಗಡೊಳ್ಳಿ ರವರು ನನ್ನ ಅಜ್ಜ. ಅವರಿಗೆ 2 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು ಇರುತ್ತಾರೆ.

ದಾವಾ ಆಸ್ತಿ ತೇರಗಾಂವದಲ್ಲಿದೆ. ಅದರ ಬ್ಲಾಕ ನಂಬರ 268 . ಅದರ ಒಟ್ಟು ಕ್ಷೇತ್ರ 5 ಎಕರೆ 39 ಗುಂಟೆ ಇದೆ. ದಾವಾ ಆಸ್ತಿಯನ್ನು ನಾನೇ ಸಾಗುವಳಿ ಮಾಡುತ್ತೇನೆ. ದಾವಾ ಆಸ್ತಿಯನ್ನು ನಾನು ಸಾಗುವಳಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪೂರ್ವಕ್ಕೆ - ನನ್ನ ದೊಡ್ಡಪ್ಪ ಮುಕ್ತಾರಸಾಬ ರವರ ಜಮೀನು , ಪಶ್ಚಿಮಕ್ಕೆ ಇರುವವರ ಹೆಸರು ಗೊತ್ತಿಲ್ಲ , ಉತ್ತರ ಮತ್ತು ದಕ್ಷಿಣಕ್ಕೆ ಇರುವವರ ಹೆಸರು ಗೊತ್ತಿಲ್ಲ. ದಾವಾ ಆಸ್ತಿಯ ಹಳೆಯ ಸರ್ವೇ ನಂಬರ ನನಗೆ ಗೊತ್ತಿಲ್ಲ. ಇಮಾಮಸಾಬ ಮದಾರಸಾಬ ತಿಗಡೊಳ್ಳಿ ರವರು ನಿಮಗೆ ಏನಾಗಬೇಕು ಎಂದರೆ ನನಗೆ ಗೊತ್ತಿಲ್ಲ, ನನ್ನ ತಂದೆಯವರಿಗೆ ಗೊತ್ತು ಎನ್ನುತ್ತಾರೆ. ದಾವಾ ಆಸ್ತಿಯ ಸಂಖ್ಯೆ 1917 ರಲ್ಲಿ ಸರ್ವೇ ನಂಬರ 197, ಅದರ ಕ್ಷೇತ್ರ 9 ಎಕರೆ 2 ಗುಂಟೆ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸರ್ವೇ ನಂಬರ 197, ಅದರ ಕ್ಷೇತ್ರ 9 ಎಕರೆ 2 ಗುಂಟೆ ಯನ್ನು ಇಮಾಮಸಾಬ ಮದಾರಸಾಬ ತಿಗಡೊಳ್ಳಿ ರವರು ಉಮ್ರಪ್ಪಾ ನಿಂಗಪ್ಪಾ ಕುಡತಾರ ರವರಿಂದ ದಿನಾಂಕ 16-09-1917 ರಂದು ಖರೀದಿಸಿದರು ಎಂದರೆ ನನಗೆ ಗೊತ್ತಿಲ್ಲ. ಆನಂತರ ಎಂ ಇ ನಂಬರ 201 ರ ಪ್ರಕಾರ ಇಮಾಮಸಾಬ ಮದಾರಸಾಬ ತಿಗಡೊಳ್ಳಿ ರವರ ಹೆಸರು ದಾವಾ ಸ್ವತ್ತಿಗೆ ನಮೂದಾಯಿತು ಎಂದರೆ ನನಗೆ ಗೊತ್ತಿಲ್ಲ. ನಂತರ ಬ್ಲಾಕ ನಂಬರ 197 ಬದಲಾಗಿ ಸರ್ವೇ

ನಂಬರ 268 ಎಂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಕಬ್ಜೆ ವಹಿವಾಟಿನಲ್ಲಿ ನೀವು ಇಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ).

ಓ.ಹೆ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ

ಪ್ರ.ದ.ನ್ಯಾದಂ., ಹಳಿಯಾಳ.